SC:76/2023
PW: 01 CW:01

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 76/2023

| | |
|---|---|
| PW | 01 |
| CW | 01 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 20.11.2025.

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಮತಿ.ನಾಜ್ನೀನ್ ಅಕ್ತರ್ ಮಲ್ದಾರ್ |
| ಗಂಡನ ಹೆಸರು | : | ಅಕ್ಮಲ್ ಬೇಗ್ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಖಾಸಗಿ ಕಂಪನಿಯಲ್ಲಿ ಕೆಲಸ |
| ವಾಸಸ್ಥಳ | : | ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ.2 ರಿಂದ 6 ರವರ ಪರಿಚಯ ಇರುತ್ತದೆ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನ್ನ ಮಾಜಿ ಪತಿ ಆಗಿರುತ್ತಾರೆ. ನಾನು 2021 ನೇ ಸಾಲಿನಲ್ಲಿ ವಿಪ್ರೋ ಕಂಪನಿಯಲ್ಲಿ ಪ್ರಾಜೆಕ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದು ಈಗ ಸೀನಿಯರ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಹಾಗೂ ಆರೋಪಿಯ ವಿವಾಹ ದಿಃ14.11.2018 ರಂದು ಆಗಿರುತ್ತದೆ. ಆ ಸಮಯದಲ್ಲಿ ಆರೋಪಿ ವಿ ಟಿ ಯು ನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದರು.

2. ನನ್ನ ಹಾಗೂ ಆರೋಪಿಯ ಮದುವೆ ಆದ ನಂತರ ನಾವಿಬ್ಬರೂ ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ 2020 ನೇ ಇಸವಿ ಮಾರ್ಚ್ ತಿಂಗಳ ವರೆಗೆ ವಾಸ ಇದ್ದೆವು. ಮದುವೆ ಆದ 1 ವರ್ಷದವರೆಗೆ ನಾನು ಹಾಗೂ ಆರೋಪಿ ಸಂತೋಷವಾಗಿ ಜೀವನ ಮಾಡಿದ್ದು , ನಾನು ಗರ್ಭಿಣಿ ಆದ ನಂತರ ತೊಂದರೆ ಪ್ರಾರಂಭ ಆಗಿರುತ್ತದೆ. 2019 ನೇ ಇಸವಿಯ ಕಡೆಯ ತಿಂಗಳಿನಲ್ಲಿ ನಾನು ಗರ್ಭಿಣಿ ಆಗಿದ್ದು ವೈದ್ಯರ ಸಲಹೆಯಂತೆ ನಾವಿಬ್ಬರೂ ಲೈಂಗಿಕ ಕ್ರಿಯೆಯಲ್ಲಿ ತೊಡಗಬಾರದು ಎಂದು ಸೂಚಿಸಿದ್ದರು. ಆರೋಪಿಯನ್ನು ಮದುವೆ ಆಗುವ ಮೊದಲು ನನಗೆ ಮದುವೆ ಆಗಿದ್ದು , ಮೊದಲನೇ ಗಂಡನಿಂದ ನನಗೆ ಒಂದು ಹೆಣ್ಣು ಮಗು ಜನಿಸಿದ್ದು, ಆರೋಪಿಯನ್ನು ಮದುವೆ ಆದ ನಂತರ ಆ ಹೆಣ್ಣು ಮಗು ನನ್ನ ಜೊತೆ ವಾಸಿಸುತ್ತಿತ್ತು.

3. ಆರೋಪಿ ನನಗೆ 2002 ರಿಂದ ಪರಿಚಯ ಇದ್ದು ನಾವಿಬ್ಬರೂ ಒಳ್ಳೆಯ ಸ್ನೇಹಿತರಾಗಿದ್ದು, ನಂತರ ಮದುವೆ ಆಗಲು ತೀರ್ಮಾನಿಸಿ ಅದರಂತೆ ಆರೋಪಿ 2011 ರಲ್ಲಿ ಅಫಿಡವಿಟ್ ಮಾಡಿಸಿದ್ದು ನಮ್ಮ ನನ್ನ ಕುಟುಂಬದವರು ಹಾಗೂ ಆರೋಪಿಯ ಕುಟುಂಬದವರು ಮದುವೆ ಒಪ್ಪದಿದ್ದ ಕಾರಣ ನಾನು ಬೆಂಗಳೂರಿನಿಂದ ಪುಣೆಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಸಂಬಂಧ ಮುಂದುವರೆದಿರಲಿಲ್ಲ. ನಂತರ ಆರೋಪಿಗೆ ಮತ್ತೊಬ್ಬ ಹುಡುಗಿಯ ಜೊತೆ ಎನ್ಗೇಜ್ಮೆಂಟ್ ಆಗಿದ್ದು ಆ ಸಮಯದಲ್ಲಿ ಆರೋಪಿಯ ತಂದೆ ತಾಯಿ ನನ್ನ ತಂದೆ ತಾಯಿಗೆ ಕಿರುಕುಳ ನೀಡುತ್ತಿದ್ದು ಅದಾದಮೇಲೆ ಆರೋಪಿ ಪುಣೆಗೆ ಬಂದು ನನ್ನನ್ನು ಭೇಟಿ ಆಗುತ್ತಿದ್ದು

ಅದಕ್ಕಾಗಿ ನಾನು ಸಮೀರ್ ಎಂಬುವವರೊಂದಿಗೆ ವಿವಾಹ ಮಾಡಿಕೊಂಡಿದ್ದೆನು. ನಾನು ಪುಣೆಯಲ್ಲಿ ಕೆಲಸ ಮಾಡುವಾಗ ಬೆಂಗಳೂರಿನ ಕಛೇರಿಗೆ ಕರ್ತವ್ಯದ ಮೇಲೆ ಭೇಟಿ ನೀಡುತ್ತಿದ್ದು. ಆ ಸಮಯದಲ್ಲಿ ನನ್ನ ಯಜಮಾನರಾಗಿದ್ದ ಸಮೀರ್ ಇವರು ನನ್ನ ಜೊತೆ ಬರುತ್ತಿದ್ದರು. ನಾನು ಬೆಂಗಳೂರಿಗೆ ಬಂದ ವಿಚಾರವನ್ನು ಆರೋಪಿ ತಿಳಿದುಕೊಂಡು ನಾನು ಉಳಿದುಕೊಂಡ ಸ್ಥಳಕ್ಕೆ ಭೇಟಿ ನೀಡಿಡುತ್ತಿದ್ದರು. ನಾನು ಆರೋಪಿಯನ್ನು ನನ್ನ ಗಂಡನಾದ ಸಮೀರ್ ಇವರಿಗೆ ಪರಿಚಯಿಸಿದ್ದು ಅವರಿಬ್ಬರೂ ಒಳ್ಳೆಯ ಸ್ನೇಹ ಹೊಂದಿದ್ದರು.

4. ನಾನು ನನ್ನ ಮೊದಲನೇ ಗಂಡ ಸಮೀರ್ ಇವರಿಂದ ಗರ್ಭಿಣಿ ಆಗಿ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದ್ದು ಆ ಸಮಯದಲ್ಲಿ ನನ್ನ ಅತ್ತೆ ಮಾವ ವಾಸ ಇರುವ ಕೊಲ್ಲಾಪುರದ ಮನೆಯಲ್ಲಿ ಅವರ ಜೊತೆ ವಾಸ ಇದ್ದೆನು. ನನ್ನ ಯಜಮಾನರಾದ ಸಮೀರ್ ಇವರು ಕೊಲ್ಲಾಪುರದಲ್ಲಿ ಚಿನ್ನ ಬೆಳ್ಳಿ ಅಂಗಡಿ ನಡೆಸುತ್ತಿದ್ದು ನಾನು ಕೊಲ್ಲಾಪುರದಲ್ಲಿ ವಾಸ ಇದ್ದಾಗ ಆರೋಪಿ ನನ್ನ ಗಂಡನ ಅಂಗಡಿಗೆ ಆಗಾಗ ಭೇಟಿ ನೀಡುತ್ತಿದ್ದರು. ನನ್ನ ಮದುವೆ ಆಗುವ ಪೂರ್ವದಲ್ಲಿ ನನ್ನ ಹಾಗೂ ಆರೋಪಿಯ ನಡುವೆ ಸಂಬಂಧ ಇದ್ದ ಸಮಯದಲ್ಲಿ ನಮ್ಮಿಬ್ಬರ ನಡುವೆ ಹಣದ ವ್ಯವಹಾರ ಇತ್ತು. ನನ್ನ ಮದುವೆ ಆದ ನಂತರ ಆರೋಪಿ ಆಗಾಗ ನನ್ನ ಗಂಡನ ಅಂಗಡಿಯ ಬಳಿ ಬರುತ್ತಿದ್ದು , ಹಲವಾರು ಬಾರಿ ಆರೋಪಿ ನನ್ನ ಗಂಡನ ಜೊತೆ ಫೋನ್ ನಲ್ಲಿ ಮಾತನಾಡಿರುತ್ತಾರೆ. ನಾನು ನನ್ನ ಅತ್ತೆ ಮಾವನ ಮನೆಯಲ್ಲಿ ವಾಸ ಇದ್ದಾಗ ಆರೋಪಿ ನನ್ನ ಫೋನ್ ಗೆ ಕರೆ ಮಾಡಿದ್ದು ಅದನ್ನು ನಾನು ಸ್ವೀಕರಿಸಿರುವುದಿಲ್ಲ. ಇದೇ ಕಾರಣಕ್ಕಾಗಿ ಆರೋಪಿ ನನ್ನ ಗಂಡನಿಗೆ ಫೋನ್ ಮಾಡಿ ನಾನು ಆರೋಪಿಯ ಕರೆಯನ್ನು

ಸ್ವೀಕರಿಸದೇ ಇದ್ದ ವಿಚಾರವನ್ನು ತಿಳಿಸಿದಾಗ ನನ್ನ ಗಂಡ ನನಗೆ ಬಂದು ಆರೋಪಿ ಫೋನ್ ಕರೆ ಮಾಡಿದರೂ ಏಕೆ ತೆಗೆದುಕೊಳ್ಳುತ್ತಿಲ್ಲ ಎಂದು ನನಗೆ ಬೈದಿರಿರುತ್ತಾರೆ.

5. 2016 ನೇ ಇಸವಿಯಲ್ಲಿ ಆರೋಪಿ ಮಧ್ಯ ಪಾನ ಮಾಡಿಕೊಂಡು ಬಂದು ನನ್ನ ಗಂಡನನ್ನು ಭೇಟಿ ಮಾಡಿ ಏನೋ ವಿಚಾರಗಳನ್ನು ತಿಳಿಸಿದ್ದು, ಅದೇ ದಿನ ನನ್ನ ಯಜಮಾನರು ನಾನು ಮನೆಯಲ್ಲಿದ್ದಾಗ ಆರೋಪಿ ನನ್ನ ಬಗ್ಗೆ ಎಲ್ಲಾ ವಿಚಾರಗಳನ್ನು ತಿಳಿಸಿರುವುದಾಗಿ ಹೇಳಿ ಆಗ ಜಾರಿಯಲ್ಲಿ ಇದ್ದ ಕಾನೂನಿನಲ್ಲಿ ನನಗೆ ಮೂರು ಬಾರಿ ತಲಾಕ್ ಹೇಳಿರುತ್ತಾರೆ. ನನ್ನ ಯಜಮಾನರು ನಮ್ಮ ಧರ್ಮದ ಪದ್ದತಿಯಂತೆ ತಲಾಕ್ ನೀಡಿದ ಕಾರಣ ನಾನು ಪುನಹಃ ಬೆಂಗಳೂರಿಗೆ ವಾಪಸ್ಸು ಬಂದು ನನ್ನ ಮಗವಿನೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದು ಆ ಸಮಯದಲ್ಲಿ ನನ್ನ ಒಂದು ಕೈನ ಮೂಳೆ ಮುರಿತ ಆಗಿತ್ತು. ಅದನ್ನು ತಿಳಿದುಕೊಂಡ ಆರೋಪಿ ನನ್ನ ಮನೆಗೆ ಬರಲು ಪ್ರಾರಂಭಿಸಿರುತ್ತಾರೆ.

6. ಆರೋಪಿ ಈ ರೀತಿ ನಮ್ಮ ಮನೆಗೆ ಭೇಟಿ ಮಾಡಲು ಪ್ರಾರಂಭಿಸಿದ ನಂತರ ನನ್ನ ಮಗಳು ಆರೋಪಿಯನ್ನು ಹಚ್ಚಿಕೊಂಡಿದ್ದು , ಆರೋಪಿ ನನ್ನ ಬಳಿ ದೇವರು ಮತ್ತೊಂದು ಅವಕಾಶ ನೀಡಿರುತ್ತಾರೆ ಎಂದು ಹೇಳಲು ಪ್ರಾರಂಭಿಸಿದ ಕಾರಣ ನನಗೆ ಆರೋಪಿಯ ಜೊತೆ ಉತ್ತಮ ಸಂಬಂಧ ಪ್ರಾರಂಭವಾಗಿರುತ್ತದೆ. ನನಗೆ ಆ ಸಮಯದಲ್ಲಿ ಮರ್ಸಿಡಿಸ್ ಬೆನ್ಸ್ ಕಂಪನಿಯಲ್ಲಿ ಕೆಲಸ ಸಿಕ್ಕಿದ್ದು ಆ ಸಮಯದಲ್ಲಿ ನನ್ನ ಮಗಳು ಒಬ್ಬಳೇ ಮನೆಯಲ್ಲಿ ಇರುತ್ತಿದ್ದ ಕಾರಣ ಒಬ್ಬ ವ್ಯಕ್ತಿಯನ್ನು ನನ್ನ ಮಗಳನ್ನು ನೋಡಿಕೊಡಲು ನೇಮಿಸಿದ್ದು, ನಾನು ಕೆಲಸಕ್ಕೆ ಹೋದ ಸಮಯದಲ್ಲಿ ಆರೋಪಿ ನಮ್ಮ ಮನೆಗೆ ಭೇಟಿ ನೀಡುತ್ತಿದ್ದು ನನ್ನ ಹಾಗೂ ನನ್ನ

ಮಗಳ ಜೊತೆ ಒಳ್ಳೆಯ ಬಾಂಧವ್ಯ ಬೆಳೆಸಿದ ಕಾರಣ ನಾವಿಬ್ಬರೂ ಪುನಹಃ ಮದುವೆ ಆಗಲು ತೀರ್ಮಾನಿಸಿರುತ್ತೇವೆ. ನಂತರ ನಾವಿಬ್ಬರೂ ದಿಃ14.11.2018 ರಂದು ಮದುವೆ ಆಗಿರುತ್ತೇವೆ. ಮದುವೆ ಆದ ನಂತರ ನನಗೆ ಮತ್ತೊಂದು ಕಂಪನಿಯಲ್ಲಿ ಒಳ್ಳೆಯ ಕೆಲಸ ಸಿಕ್ಕ ಕಾರಣ ನಾನು , ಆರೋಪಿ ನನ್ನ ಮಗಳೊಂದಿಗೆ ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಸ ಮಾಡಲು ಪ್ರಾರಂಭಿಸಿರುತ್ತೇವೆ.

7. ಆ ಸಮಯದಲ್ಲಿ ಆರೋಪಿ 3 ದಿವಸಗಳ ಕಾಲ ಬೆಳಗಾಂ ನಲ್ಲಿ ಕೆಲಸದ ನಿಮಿತ್ತ ಹೋಗಬೇಕಾಗಿದ್ದ ಕಾರಣ ನಮ್ಮ ಜೊತೆ 3 ದಿವಸ ಇರುತ್ತಿದ್ದರು. ಇದೇ ರೀತಿ 2020 ರವರೆಗೂ ನಡೆದುಕೊಂಡು ಬಂದಿರುತ್ತದೆ. ನಂತರ ನಾನು 2019 ನೇ ಇಸವಿ ಕೊನೆ ಭಾಗದಲ್ಲಿ ಗರ್ಭಿಣಿ ಆಗಿದ್ದು ಈ ವಿಚಾರ ತಿಳಿದ ನಂತರ ಆರೋಪಿ ನನ್ನ ಜೊತೆ ಒರಟಾಗಿ ನಡೆದುಕೊಳ್ಳಲು ಪ್ರಾರಂಭಿಸಿದ್ದು ನಮಗೆ ಯಾವುದೇ ರೀತಿ ಸಹಕಾರ ನೀಡುತ್ತಿರಲಿಲ್ಲ. ನಾನು ವೈದ್ಯರ ಬಳಿ ಹೋಗಿ ಸ್ಕ್ಯಾನಿಂಗ್ ಮಾಡಿಸಿದಾಗ ಮಗುವಿನ ಸ್ಥಿತಿ ಆರೋಗ್ಯವಾಗಿ ಇರುವುದು ಕಂಡುಬಂದಿದ್ದು , ವೈದ್ಯರು ನನಗೆ 5 ತಿಂಗಳು ಆಗುವವರೆಗೂ ಆರೋಪಿಯ ಜೊತೆ ಲೈಂಗಿಕ ಕ್ರಿಯೆಯಲ್ಲಿ ತೊಡಗಬಾರದು ಎಂದು ಸೂಚಿಸಿದ್ದರು.

8. ದಿಃ25.01.2020 ರಂದು ಆರೋಪಿ ಬಹಳ ಕೋಪದಿಂದ ಮನೆಗೆ ಬಂದು ನನಗೆ ಲೈಂಗಿಕ ಕ್ರಿಯೆಗೆ ಸಹಕರಿಸುವಂತೆ ಒತ್ತಾಯಿಸಿದ್ದು ನಾನು ಎಷ್ಟು ತಡೆಯಲು ಪ್ರಯತ್ನಿಸಿದರೂ ಸಹಾ ಆರೊಪಿ ಸುಮ್ಮನಾಗದೇ ಆ ದಿನ ನನ್ನ ಜೊತೆ ಲೈಂಗಿಕ ಕ್ರಿಯೆ ಮಾಡಿರುತ್ತಾರೆ. ಅದಾದ ಮೇಲೆ ನನಗೆ ಬಹಳ ನೋವು ಪ್ರಾರಂಭ ಆಗಿರುತ್ತದೆ. ಮಧ್ಯ

ರಾತ್ರಿಯಲ್ಲಿ ನನಗೆ ಬಹಳ ನೋವು ಪ್ರಾರಂಭವಾದ ಕಾರಣ ವೈದ್ಯರ ಬಳಿ ಹೋಗೋಣ ಎಂದು ಕೇಳಿದಾಗ ಆರೋಪಿ ಅದಕ್ಕೆ ಪ್ರತಿಕ್ರಿಯಿಸಿಲ್ಲ . ನನಗೆ ಬಹಳ ನೋವು ಆಗುತ್ತಿದ್ದ ಕಾರಣ ನಾನೇ ವೈದ್ಯರ ಬಳಿ ಹೋಗುವುದಾಗಿ ಹೇಳಿ ಮೊದಲನೇ ಮಹಡಿಯ ಮೆಟ್ಟಿಲ್ಲನ್ನು ಇಳಿಯುತ್ತಿದ್ದಾಗ ಆರೋಪಿ ನನ್ನ ಹಿಂದಿನಿಂದ ಬಂದು ನನ್ನನ್ನು ದೂಡಿದಾಗ , ನಾನು ಕೆಳಗೆ ಬಿದ್ದಿರುತ್ತೇನೆ. ನಂತರ ಆರೋಪಿ ನನ್ನ ಕೂದಲನ್ನು ಹಿಡಿದು ನನ್ನನ್ನು ಮೇಲಕ್ಕೆ ಎಳೆದುಕೊಂಡು ಹೋಗಿದ್ದು , ನನಗೆ ಅದಕ್ಕೂ ಮೊದಲು ನನ್ನ ಕೈ ಮೂಳೆ ಮುರಿತ ಆಗಿತ್ತು. ಆರೋಪಿ ನನ್ನನ್ನು ದೂಡಿದ ಕಾರಣ ನನ್ನ ಹೊಟ್ಟೆಗೆ ಬಲವಾಗಿ ಪೆಟ್ಟಾಗಿದ್ದು , ಆರೋಪಿ ನನ್ನ ಕೂದಲು ಹಿಡಿದು ಮೆಟ್ಟಿಲ ಮೇಲೆ ಎಳೆದುಕೊಂಡು ಹೋಗುವಾಗಲೂ ನನ್ನ ಹೊಟ್ಟೆಗೆ ಪೆಟ್ಟಾಗಿರುತ್ತದೆ.

9. ಆರೋಪಿ ನನ್ನನ್ನು ಮನೆಯ ಒಳಗೆ ಕರೆದುಕೊಂಡು ಹೋದ ನಂತರ ಈಗಾಗಲೇ ಅವೇಳೆ ಆಗಿರುವ ಕಾರಣ ಮಾರನೇ ದಿನ ಬೆಳಗ್ಗೆ ವೈದ್ಯರ ಬಳಿ ಹೋಗೋಣ ಎಂದು ತಿಳಿಸಿದ್ದು ನಾನು ಹಾಗೆ ಮನೆಯಲ್ಲಿ ಕುಳಿತುಕೊಂಡಿದ್ದು ಬೆಳಕು ಆಗುವ ಸಮಯದಲ್ಲಿ ನನಗೆ ನಿದ್ದೆ ಬಂದಿತ್ತು. ಆರೋಪಿ ನಂತರ ತನನ ಕೆಲಸಕ್ಕೆ ಮನೆಯಿಂದ ಹೋಗಿದ್ದು 3 ದಿವಸಗಳ ಕಾಲ ಮನೆಗೆ ವಾಪಸ್ಸು ಬಂದಿರುವುದಿಲ್ಲ. ಆರೋಪಿ ದಿಃ28.01.2020 ರಂದು ಪುನಹಃ ಮನೆಗೆ ಬಂದಿರುತ್ತಾರೆ. ನನಗೆ ಬಹಳ ನೋವು ಇದ್ದ ಕಾರಣ ನಾನು ಆರೋಪಿಗೆ ವೈದ್ಯರ ಬಳಿ ಕರೆದುಕೊಂಡು ಹೋಗುವಂತೆ ಕೇಳಿಕೊಂಡಾಗ ಆರೋಪಿ ನನ್ನನ್ನು ಅನುಗ್ರಹ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು , ವೈದ್ಯರು ನನ್ನನ್ನು ಪರೀಕ್ಷೆ ಮಾಡಿ ನನ್ನ ಮಗು ಹೊಟ್ಟೆಯಲ್ಲಿ

ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ಅದನ್ನು ಕೇಳಿದಾಗ ನನಗೆ ಬಹಳ ನೋವಾಗಿದ್ದು , ಆಸ್ಪತ್ರೆಯ ಆವರಣದಲ್ಲಿ ಉರುಳಾಡಿ , ಕಿರುಚಿರುತ್ತೇನೆ.

10. ನಂತರ ನಾವಿಬ್ಬರೂ ವಾಪಸ್ಸು ಮನೆಗೆ ಬಂದಿದ್ದು , ಆ ಸಮಯದಲ್ಲಿ ನಾನು ಧರಸಿದ್ದ ಬಟ್ಟೆಗಳು ಸಂಪೂರ್ಣವಾಗಿ ಕೊಳಕಾಗಿದ್ದು , ವೈದ್ಯರ ಸೂಚನೆಯಂತೆ ನನ್ನ ಹೊಟ್ಟೆಯಲ್ಲಿದ್ದ ಮೃತ ಮಗುವನ್ನು ತೆಗೆಸಬೇಕಾಗಿರುವುದು ಅವಶ್ಯಕತೆ ಇತ್ತು. ವೈದ್ಯರು ತಿಳಿಸಿದ ಹಾಗೆ ಮಾರನೇ ದಿನ ಬೆ. ನಾನು 6.00 ಗಂಟೆಗೆ ಆಸ್ಪತ್ರೆಗೆ ಹೋದಾಗ ನನ್ನನ್ನು ಆಸ್ಪತ್ರೆಗೆ ದಾಖಲಿಸಿಕೊಂಡಿರುತ್ತಾರೆ. ನನಗೆ ಆ ಸಮಯದಲ್ಲಿ ಜ್ಞಾನ ತಪ್ಪಿದ್ದು , ನನ್ನನ್ನು ಆಸ್ಪತ್ರೆಗೆ ಸೇರಿಸಿದ ನಂತರ ಆರೋಪಿ ಹೊರಟು ಹೋಗಿದ್ದು , ಸಂಜೆಯ ವೇಳೆ ನನಗೆ ಶಸ್ತ್ರ ಚಿಕಿತ್ಸೆ ಮಾಡಿದ್ದು , ಮಾರನೇ ದಿನ ಆರೋಪಿ ಆಸ್ಪತ್ರೆಗೆ ಭೇಟಿ ನೀಡಿರುತ್ತಾರೆ. ನಂತರ ಆರೋಪಿ ನನ್ನನ್ನು ಒಂದು ಕಾರಿನಲ್ಲಿ ಮನೆಗೆ ಕರೆದುಕೊಂಡು ಬಂದು ನನ್ನ ಜೊತೆ ಜಗಳ ಆಡಿ , ನನ್ನನ್ನು ಬಿಟ್ಟು ಹೊರಟು ಹೋಗಿದ್ದು ಅದನ್ನು ದಿಃ30.01.2020 ಆಗಿರುತ್ತದೆ.

11. ನನಗೆ ಅದೇ ದಿನ ದೂರು ಕೊಡಲು ಆಗಿರುವುದಿಲ್ಲ ಕಾರಣ ನನ್ನ ದೈಹಿಕ ಸ್ಥಿತಿ ಚೆನ್ನಾಗಿ ಇರಲಿಲ್ಲ. ದಿಃ02.02.2020 ರಂದು ಹೆಬ್ಬಗೋಡಿ ಪೊ.ಠಾಣೆಗೆ ಹೋಗಿ ನಾನು ದೂರು ದಾಖಲಿಸಿರುತ್ತೇನೆ. ಆ ದಿನ ಪೊಲೀಸರು ದೂರನ್ನು ಸ್ವೀಕರಿಸಿಲ್ಲ ಕಾರಣ ನನ್ನ ಹಾಗೂ ಆರೋಪಿಯ ನಡುವೆ ರಾಜಿ ಆಗಬಹುದು ಎಂದು ತಿಳಿದು ನನಗೆ ಎನ್ ಸಿ ಆರ್ ನೀಡಿರುತ್ತಾರೆ. ಇದಾದ 20 ದಿವಸಗಳ ಕಾಲ ಆರೋಪಿ ಮನೆಗೆ ಬಂದಿರುವುದಿಲ್ಲ. ಈ ಮಧ್ಯದಲ್ಲಿ ಪೊಲೀಸರು ಆರೋಪಿಯನ್ನು ಪತ್ತೆ ಮಾಡಲು ಪ್ರಯತ್ನಿಸುತ್ತಿದ್ದ ವಿಚಾರ

ಆರೋಪಿಗೆ ತಿಳಿದುಬಂದ ಕಾರಣ ನನಗೆ ಆರೋಪಿ ಫೋನ್ ಮಾಡಿ ನಾನು ಸಾಯುತ್ತೇನೆ , ನನ್ನ ಕುಟುಂಬದಲ್ಲಿ ಅವಮಾನ ಆಗಿರುವುದಾಗಿ ಹೇಳುತ್ತಿದ್ದು 20 ದಿವಸಗಳ ನಂತರ ಆರೋಪಿ ಅವರ ಹಿರಿಯ ಅಧಿಕಾರಿಯೊಂದಿಗೆ ನಮ್ಮ ಮನೆಗೆ ಬಂದಿರುತ್ತಾರೆ.

12. ಆ ದಿನ ಆರೋಪಿಯ ಜೊತೆ ಬಂದಿದ್ದ ಹಿರಿಯ ಅಧಿಕಾರಿ ನನ್ನ ಬಳಿ ನನ್ನ ಹಾಗೂ ಆರೋಪಿಯ ಮದುವೆ ಅಂತರ್ ಧರ್ಮಿಯ ಮದುವೆ ಆಗಿದ್ದು , ಇಂತಹ ಸಂದರ್ಭದಲ್ಲಿ ಆರೋಪಿಗೆ ಸ್ವಲ್ಪ ಬೇಸರ ಉಂಟಾಗಿದ್ದು , ಈ ಹಿಂದೆ ಆಗಿರುವುದನ್ನು ಮರೆತು ಆರೋಪಿಯನ್ನು ಕ್ಷಮಿಸುವಂತೆ ಹೇಳಿರುತ್ತಾರೆ. ಇದಾದ ಮೇಲೆ ನಾನು ಹಾಗೂ ಆರೋಪಿ ಒಟ್ಟಿಗೆ ಫೆಬ್ರವರಿ ತಿಂಗಳಿಂದ ಮಾರ್ಚ್ ತಿಂಗಳವರೆಗೆ ಅಂದರೆ 1 ತಿಂಗಳವರೆಗೆ ವಾಸವಾಗಿದ್ದು ಆ ಸಮಯದಲ್ಲಿ ನನ್ನ ತಂದೆಗೆ ಕ್ಯಾನ್ಸರ್ ಇರುವುದು ಪತ್ತೆ ಆಗಿರುತ್ತದೆ. ನನ್ನ ಕುಟುಂಬದವರು ಹುಬ್ಬಳ್ಳಿಯಲ್ಲಿ ವಾಸ ಇದ್ದ ಕಾರಣ ನನ್ನ ತಂದೆಯನ್ನು ಭೇಟಿ ಆಗಲು ನನ್ನ ಮಗಳೊಂದಿಗೆ ನಾನು ಹುಬ್ಬಳ್ಳಿಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಕೋವಿಡ್ ಇದ್ದ ಕಾರಣ ಆರೋಪಿ ಹುಬ್ಬಳ್ಳಿಗೆ ಭೇಟಿ ನೀಡಲು ಸಾಧ್ಯ ಆಗಿರುವುದಿಲ್ಲ. ನಾನು ನನ್ನ ತಂದೆಯೊಂದಿಗೆ ಹುಬ್ಬಳ್ಳಿಯಲ್ಲಿ ವಾಸವಿದ್ದು , ನನ್ನ ತಂದೆ ಮೇ 2020 ರಲ್ಲಿ ಮೃತಪಟ್ಟಿದ್ದು ನಾನು ಪುನಹಃ ಬೆಂಗಳೂರಿಗೆ ಜೂನ್ 2020 ರಲ್ಲಿ ವಾಪಸ್ತು ಬಂದಿರುತ್ತೇವೆ.

13. ನನ್ನ ಮಗು ಹಾಗೂ ನನ್ನ ತಂದೆ ಮೃತ ಪಟ್ಟಿದ್ದ ಕಾರಣ ನನ್ನ ಮಾನಸಿಕ ಸ್ಥಿತಿ ಚೆನ್ನಾಗಿ ಇರಲಿಲ್ಲ. ಆ ಸಮಯದಲ್ಲಿ ಆರೋಪಿ ನನಗೆ ಸಮಾಧಾನ ಆಗುವಂತೆ ನಾವಿಬ್ಬರೂ ಒಟ್ಟಿಗೆ ವಾಸಿಸೋಣ , ನಮ್ಮ ಮದುವೆಯನ್ನು ನೊಂದಣಿ ಮಾಡಿಸೋಣ ಎಂದು

ತಿಳಿಸಿರುತ್ತಾರೆ. ನಂತರ ಕಾನೂನ ಪ್ರಕಾರ ಮದುವೆ ನೊಂದಣಿ ಮಾಡಿಸಲು ಎಲ್ಲಾ ಕ್ರಮಗಳನ್ನು ಅನುಸರಿಸಿ ನಮ್ಮಿಬ್ಬರ ಮದುವೆಯನ್ನು ದಿಃ13.07.2020 ರಂದು ನೊಂದಣಿ ಮಾಡಿಸಿರುತ್ತೇವೆ. ಅದೇ ದಿನ ಕೋವಿಡ್ ನಿಯಮಗಳು ಇದ್ದ ಕಾರಣ ನನಗೆ ಆಗಾಗ ಮನೆಗೆ ಬರಲು ಆಗುವುದಿಲ್ಲ ಎಂದು ಹೇಳಿ ನನ್ನನ್ನು ಹಾಗೂ ನನ್ನ ಮಗಳನ್ನು ಮುದ್ದೇನಹಳ್ಳಿಗೆ ಕರೆದುಕೊಂಡು ಬಂದಿರುತ್ತಾರೆ.

14. ನಾನು ಹುಬ್ಬಳ್ಳಿಯಲ್ಲಿದ್ದಾಗ ಆರೋಪಿಯ ವಯಸ್ಸಾದ ತಂದೆ ತಾಯಿಗಳು ಶಿಡ್ಲಘಟ್ಟಕ್ಕೆ ಬಂದಿದ್ದು ಅವರಿಗೂ ಆರೋಪಿಯ ಅವಶ್ಯಕತೆ ಇದ್ದ ಕಾರಣ ಶಿಡ್ಲಘಟ್ಟದಲ್ಲಿ ವಾಸಿಸುತ್ತಿದ್ದರು. ನಾವು ಮುದ್ದೇನಹಳ್ಳಿಗೆ ಬಂದ ನಂತರ ಆರೋಪಿ ನನ್ನ ಬಳಿ ಬಂದು ನಾನು ಬೆಳಗಿನಿಂದ ಸಂಜೆವರೆಗೂ ನಿಮ್ಮ ಜೊತೆ ಇರುತ್ತೇನೆ, ರಾತ್ರಿ ವೇಳೆ ನನ್ನ ತಂದೆ ತಾಯಿಯ ಆರೈಕೆ ಮಾಡಬೇಕಾದ ಕಾರಣ ಶಿಡ್ಲಘಟ್ಟಕ್ಕೆ ಹೋಗಿ ಪುನಹಃ ಬೆಳಗ್ಗೆ ಬರುತ್ತೇನೆ ಎಂನದು ತಿಳಿಸಿದ್ದು ನಾನು ಅದಕ್ಕೆ ಒಪ್ಪಿರುತ್ತೇನೆ. ನಾನು ಪುನಹಃ 2020 ನೇ ಇಸವಿ ನವೆಂಬರ್ ತಿಂಗಳಿನಲ್ಲಿ ಗರ್ಭಿಣಿ ಆಗಿರುತ್ತೇನೆ. ನಾನು ಗರ್ಭಿಣಿ ಆದ ವಿಚಾರ ತಿಳಿದುಬಂದ ಕೂಡಲೇ ಆರೋಪಿ ಸಂಪೂರ್ಣವಾಗಿ ಬದಲಾಯಿಸಿರುತ್ತಾರೆ. ನಂತರ ಆರೋಪಿ ಎಲೆಕ್ಟ್ರಾನಿಕ್ ಸಿಟಿಗೆ ಹೋಗೋಣ ಎಂದು ಹೇಳಿ ನನ್ನ ಸಾಮ್ರಾಗ್ರಿಗಳನ್ನು ವಾಹನಕ್ಕೆ ಲೋಡ್ ಮಾಡಿ ನಾನು ಎಲೆಕ್ಟ್ರಾನಿಕ್ ಸಿಟಿಗೆ ಹೋಗುವಂತೆ ತಿಳಿಸಿ ನಂತರ ಅಲ್ಲಿಗೆ ಬರುವುದಾಗಿ ಹೇಳಿರುತ್ತಾರೆ.

15. ನಾನು ಆ ದಿನ ಸ್ಕ್ಯಾನಿಂಗ್ ಮಾಡಿಸಿದಾಗ ನನನ ಹೊಟ್ಟೆಯಲ್ಲಿದ್ದ ಮಗು ಆರೋಗ್ಯವಾಗಿ ಇರುವುದು ಕಂಡು ಬಂದಿರುತ್ತದೆ. ಆರೋಪಿ ಎಲೆಕ್ಟ್ರಾನಿಕ್ ಸಿಟಿಗೆ ಬರುತ್ತೇನೆ ಎಂದು ಹೇಳಿ ನಮ್ಮ ಮನೆಗೆ ಬಂದಿರುವುದಿಲ್ಲ. ನಂತರ ದಿಃ14.11.2020 ರಂದು ನಮ್ಮ ಮದುವೆ ವಾರ್ಷಿಕ ಇದ್ದ ಕಾರಣ ಆ ದಿನ ಆರೋಪಿ ನಮ್ಮ ಮನೆಗೆ ಬಂದಿರುತ್ತಾರೆ. ನಾವು ಆ ದಿನ ನಾನು ಹಾಗೂ ಆರೋಪಿ ನನ್ನ ಮಗಳೊಂದಿಗೆ ಊಟಕ್ಕೆ ಹೋಗಿ ವಾಪಸ್ಸು ಮನೆಗೆ ಬಂದಿದ್ದು , ವೈದ್ಯರ ಸಲಹೆಯಂತೆ ನಾನು ಮಾತ್ರೆ ತೆಗೆದುಕೊಳ್ಳಲು ಯತ್ನಿಸಿದಾಗ ಆರೋಪಿ ನನ್ನ ಬಳಿ ಬಂದು , ಆ ಮಾತ್ರೆ ಕೆಲಸ ಮಾಡುವುದಿಲ್ಲ ನನ್ನ ಬಳಿ ಒಳ್ಳೆಯ ಮಾತ್ರೆ ಇರುವುದಾಗಿ ಹೇಳಿ ಒಂದು ಮಾತ್ರೆಯನ್ನು ನೀಡಿರುತ್ತಾರೆ. ಅದಾದ ಮೇಲೆ ನೀನು ವಿಶ್ರಾಂತಿ ತೆಗೆದುಕೋ , ನನಗೆ ಹೊರಗೆ ಕೆಲಸ ಇರುವುದಾಗಿ ಹೇಳಿ ಮನೆಯಿಂದ ಹೋಗಿರುತ್ತಾರೆ.

16. ಅದೇ ದಿನ ರಾತ್ರಿ ನನಗೆ ರಕ್ತಸ್ರಾವ ಪ್ರಾರಂಭವಾಗಿದ್ದು ಮಾರನೇ ದಿನ ರಕ್ತಸ್ರಾವ ಹೆಚ್ಚಾದ್ಧ ಕಾರಣ ನಾನು ಆರೋಪಿಗೆ ಫೋನ್ ಮಾಡಿ ತಿಳಿಸಿದ್ದು , ಗರ್ಭಿಣಿ ಮಹಿಳೆಯರಲ್ಲಿ ಇದು ಸಾಮಾನ್ಯ ಎಂದು ಆರೋಪಿ ಹೇಳಿದ್ದು ನಮ್ಮ ಮನೆಗೆ ಬಂದಿರುವುದಿಲ್ಲ. ನಾನು ನಂತರ ಅನುಗ್ರಹ ಆಸ್ಪತ್ರೆಗೆ ತೋರಿಸುವ ಉದ್ದೇಶದಿಂದ ಒಂದು ಆಟೋದಲ್ಲಿ ಭೇಟಿ ನೀಡಿದಾಗ ಆ ಸಮಯದಲ್ಲಿ ಒಂದು ಹಬ್ಬ ಇದ್ದ ಕಾರಣ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡುವ ತಾಂತ್ರಿಕ ಸಹಾಯಕರು ಯಾರು ಲಭ್ಯ ಇರಲಿಲ್ಲ. ಆದ ಕಾರಣ ಸ್ಕ್ಯಾನಿಂಗ್ ಮಾಡಿಸಬೇಕಾದ ಅವಶ್ಯಕತೆ ಇದ್ದ ಕಾರಣ ನಾನು ಸ್ಪ್ರಿಂಗ್ ಲೀವ್ಸ್ ಆಸ್ಪತ್ರೆಗೆ ಸ್ಕ್ಯಾನಿಂಗ್ ಮಾಡಿಸಲು ಹೋಗಿರುತ್ತೇನೆ. ಅಲ್ಲಿ ವೈದ್ಯರು ನನ್ನನ್ನು ಪರೀಕ್ಷೆ ಮಾಡಿ ಚಿಕಿತ್ಸೆ ನೀಡಿ ಸ್ಕ್ಯಾನಿಂಗ್ ಮಾಡಿಸಬೇಕಾದ ಅವಶ್ಯಕತೆ ಇರುವುದಾಗಿ ಹೇಳಿದ್ದು , ಸದರಿ ಆಸ್ಪತ್ರೆಯಲ್ಲೂ ಸ್ಕ್ಯಾನಿಂಗ್

ಮಾಡುವ ತಾಂತ್ರಿಕ ಸಹಾಯಕರು ಯಾರು ಇಲ್ಲದಿದ್ದ ಕಾರಣ ನಾನು ಬೆಂಗಳೂರಿನ ಜಯನಗರದಲ್ಲಿರುವ ಗುಣಶೀಲ ಆಸ್ಪತ್ರೆಗೆ ಭೇಟಿ ನೀಡಿರುತ್ತೇನೆ. ನಾನು ಅದಕ್ಕೂ ಮೊದಲು ನನಗೆ ರಕ್ತ ಸ್ರಾವ ಆದ ಫೋಟೋವನ್ನು ಆರೋಪಿಗೆ ಕಳುಹಿಸಿದ್ದು , ಹಲವಾರು ಬಾರಿ ಫೋನ್ ಕರೆ ಮಾಡಿದ್ದು , ವೈದ್ಯರು ಸಹಾ ಆರೋಪಿಗೆ ಫೋನ್ ಕರೆ ಮಾಡಿ ವಿಚಾರ ತಿಳಿಸಲು ಯತ್ನಿಸಿದರೂ ಸಹಾ ಆರೋಪಿ ಕರೆ ಸ್ವೀಕರಿಸಿಲ್ಲ ಹಾಗೂ ಆಸ್ಪತ್ರೆಗೂ ಭೇಟಿ ನೀಡಿರುವುದಿಲ್ಲ. ನನ್ನ ಜೊತೆ ಕೆಲಸ ಮಾಡುತಿದ್ದ ಒಬ್ಬರು ಆರೋಪಿಯ ಜೊತೆ ಗೆಳತನ ಇದ್ದ ಕಾರಣ ಆರೋಪಿಗೆ ಫೋನ್ ಮಾಡಿ ವಿಚಾರ ತಿಳಿಸಿದಾಗ , ನಾನು ಮಾರನೇ ದಿನ ಬರುತ್ತೇನೆ ಅಲ್ಲಿಯವರೆಗೂ ನನ್ನನ್ನು ನೋಡಿಕೊಳ್ಳುವಂತೆ ಆರೋಪಿ ತಿಳಿಸಿರುತ್ತಾರೆ.

17. ನಾನು ಗುಣಶೀಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ನಂತರ ಜಯನಗರದಲ್ಲಿರುವ ನನ್ನ ಸಹೋದರಿಯ ಮನೆಗೆ ಹೋಗಿ ವಿಶ್ರಾಂತಿ ಪಡೆಯುತ್ತಿದ್ದೆನು. ನಾನು ಪುನಹಃ ಆರೋಪಿಯ ವಿರುದ್ಧ ದೂರು ದಾಖಲಿಸಬಹುದು ಎಂದು ತಿಳಿದುಕೊಂಡು ಆರೋಪಿ ಆಗಾಗ ನನಗೆ ಫೋನ್ ಕರೆ ಮಾಡಿ ನಾನು ಎಲ್ಲಿ ಇರುತ್ತೇನೆ ಎಂದು ಚೆಕ್ ಮಾಡುತ್ತಿದ್ದರು. ಅದಾದ 4-5 ದಿವಸಗಳ ನಂತರ ಆರೋಪಿ ಫೋನ್ ಮಾಡಿ ತನ್ನ ತಂದೆ ತಾಯಿಯನ್ನು ಬೆಳಗಾಂ ನಲ್ಲಿ ಬಿಟ್ಟು ವಾಪಸ್ಸು ಬರುತ್ತೇನೆ ಎಂದು ತಿಳಿಸಿರುತ್ತಾರೆ. ಅದಾದಮೇಲೆ ಆರೋಪಿ ಮುದ್ದೇನಹಳ್ಳಿಯಲ್ಲಿ ಇರುವ ಯಾವುದೋ ಬೆಟ್ಟದ ಮೇಲೆ ನಿಂತು ವಿಡಿಯೋ ಕಾಲ್ ಮಾಡಿದ್ದು ಆ ಸಮಯದಲ್ಲಿ ಆರೋಪಿ ಮಧ್ಯಪಾನ ಮಾಡಿರುವುದು ಕಂಡು ಬಂದಿದ್ದು , ವಿಡಿಯೋ ಕಾಲ್ ನಲ್ಲಿ ನೀನು ನನಗೆ ಬದುಕಲು ಬಿಡುತ್ತಿಲ್ಲ , ನಾನು ಕೆಳಗೆ ಬೀಳುತ್ತೇನೆ ಎಂದು ತೋರಿಸಿರುತ್ತಾರೆ.

18. ನಾನು ಆ ಸಮಯದಲ್ಲಿ ಆರೋಪಿಗೆ ಪರಸ್ಪರ ಮಾತನಾಡೋಣ , ಆ ರೀತಿ ಕೆಳಗೆ ನೆಗೆಯುವುದು ಬೇಡ ಎಂದು ತಿಳಿಸಿದ್ದು , ನಂತರ ಆರೋಪಿಯ ಜೊತೆ ಕೆಲಸ ಮಾಡುವ ವ್ಯಕ್ತಿಗೆ ಫೋನ್ ಮಾಡಿ ಆರೋಪಿ ಎಲ್ಲಿ ಇದ್ದಾರೆ ಎಂದು ತಿಳಿದುಕೊಳ್ಳುವಂತೆ ಹೇಳಿರುತ್ತೇನೆ. ಅದಾದಮೇಲೆ ಆರೋಪಿ ವಾಪಸ್ಸು ಮನೆಗೆ ಬಂದಿದ್ದು , ಆರೋಪಿ ಈ ರೀತಿ ವರ್ತಿಸುತ್ತಿರುವ ಬಗ್ಗೆ ಏನು ಕಾರಣ ಎಂದು ತಿಳಿದುಕೊಳ್ಳಲು ಹಲವಾರು ಕೌನ್ಸಿಲಿಂಗ್ ಸೆಂಟರ್ ಗೆ ಆರೋಪಿಯನ್ನು ಕರೆದುಕೊಂಡು ಹೋಗಿದ್ದೆನು. ನಂತರ ಆರೋಪಿ ನನ್ನನ್ನು ಹಾಗೂ ನನ್ನ ಮಗಳನ್ನು ಪುನಹಃ ಮುದ್ದೇನಹಳ್ಳಿಗೆ ಕರೆದುಕೊಂಡು ಬಂದಿರುತ್ತಾರೆ. ಮುದ್ದೇನಹಳ್ಳಿಗೆ ಬಂದ ನಂತರ ಆರೋಪಿಯ ವರ್ತನೆ ಸಂಪೂರ್ಣವಾಗಿ ಬದಲಾಯಿಸಿದ್ದು , ನಾನು ಇದರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದಾಗ ನನ್ನ ಮದುವೆ ನೊಂದಣಿ ಆಗುವ ಮೊದಲೇ ಆರೋಪಿ ಮತ್ತೊಂದು ಮದುವೆ ಆಗಿ ನೊಂದಣಿ ಆಗಿರುವುದು ತಿಳಿದುಬಂತು. ಇದಾದ ಮೇಲೆ ಆರೋಪಿ ಮದುವೆ ಆಗಿದ್ದ ಮಹಿಳೆ ಮುದ್ದೇನಹಳ್ಳಿಯಲ್ಲಿ ಆರೋಪಿಯ ತಂದೆ ತಾಯಿಯ ಜೊತೆ ವಾಸ ಆಗಿರುವುದು ಕಂಡು ಬಂದಿರುತ್ತದೆ.

**ಈ ಹಂತದಲ್ಲಿ ಮಾನ್ಯ ಪಿಪಿ ರವರು ಹೆಚ್ಚಿನ ವಿಚಾರಣೆಗೆ ಸಮಯ ಕೋರಿದ್ದು ನೀಡಲಾಯಿತು.**

SC:76/2023
PW: 01 CW:01

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 20.11.2025 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

sd/-
**(ಎಸ್. ಶ್ರೀಧರ)**
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.